ಮೂ. ದಾ. ನಂ. 19/22

ಪಿ.ಡಬ್ಲ್ಯು.1

(ಇಂದು ದಿನಾಂಕಃ 24-10-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಆರ್.ಎಸ್.ಎಚ್.(ಜಿ) ವಕೀಲರಿಂದಃ**

ಮೂಲ ದಾವೆಯಲ್ಲಿ ಪ್ರತಿವಾದಿಯವರು ಏಕತರ್ಫಿಯಾಗಿದ್ದು ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ತದನಂತರ ಪ್ರತಿವಾದಿಯರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. 2022 ರಲ್ಲಿ ನನ್ನ ಮಾವ ಪ್ರೋಸಟ್ಟೈಟ ಕ್ಯಾನ್ಸರನಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಸಮನ್ಸ್ ಜಾರಿ ಮಾಡುವ ಸಮಯದಲ್ಲಿ ನಮ್ಮ ಮಾವ ಕೆ.ಎಸ್.ಹೆಗಡೆ ಆಸ್ಪತ್ರೆ, ಮಂಗಳೂರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಅವರ ಮೂವರು ಮಕ್ಕಳು ಅವರ ಆರೈಕೆ ಮಾಡಿಕೊಳ್ಳಲು ಕೆ.ಎಸ್.ಹೆಗಡೆ ಆಸ್ಪತ್ರೆ, ಮಂಗಳೂರಿನಲ್ಲಿ ಅವರ ಜೊತೆ ಇದ್ದರು ಎಂದರೆ ಸರಿಯಲ್ಲ. ದಿನಾಂಕಃ 06-07-2022 ರಿಂದು ಅವರು ಚಿಕಿತ್ಸೆಗೆ ದಾಖಲಾಗಿದ್ದು ದಿನಾಂಕ 09-08-2022 ರಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಮನ್ಸ್ ಜಾರಿಗೆ ಹೋದಾಗ ಮನೆಗೆ ಬೀಗ ಹಾಕಿದೆ ಎಂದು ವಾಪಸ್ ಬಂದಿದೆ ಎಂದರೆ ಸರಿ. ನೋಂದಾಯಿತ ಅಂಚೆ ಮೂಲಕ ಸಮನ್ಸ್ ಹೋದಾಗ ಅದನ್ನು ಯಾರೂ ಕ್ಲೇಮ್ ಮಾಡಿಲ್ಲ ಎಂದು ವಾಪಸ್ಸಾಗಿದೆ ಎಂದರೆ ಸರಿ. ಸಮನ್ಸ್ ಕೋರ್ಟ ಮೂಲಕ ಹಾಗೂ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು ಪ್ರತಿವಾದಿಯರ ಗಮನಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳನ್ನು ಮಾನ್ಯ ಉಚ್ಚ ನ್ಯಾಯಾಲಯ ಪರಿಗಣಿಸಿ ಡಿಕ್ರಿಯನ್ನು ಮರುವಿಚಾರಣೆಗೆ ವಾಪಸ್ ಕಳುಹಿಸಿದ್ದಾರೆ ಎಂದರೆ ಇರಬಹುದು. ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಗಮನಕ್ಕೆ ತರದೇ ದುರುಪಯೋಗ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಾರವಾರನಲ್ಲಿ ಬಾಡಿಗೆ ಮನೆಯಲ್ಲಿ 3 - 4 ವರ್ಷಗಳಿಂದ ವಾಸಿಸುತ್ತಿದ್ದೇನೆ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ನಾನು ಕಾರವಾರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದ ಕಾರಣ ಹಾಗೂ ನನ್ನ ಮಾವನವರು ಅರ್ಗಾದಲ್ಲಿ ಇದ್ದ ಕಾರಣ ನನಗೆ ಅವರು ಆಸ್ಪತ್ರೆಯಲ್ಲಿ ದಾಖಲಾದ

ಬಗ್ಗೆ ಗೊತ್ತಾಗಿರಲಿಲ್ಲ. 2019 ರಲ್ಲಿ ನಾನು ನನ್ನ ಗಂಡ ಮತ್ತು ಉಳಿದ ಪ್ರತಿವಾದಿಯರು ಮತ್ತು ಅವರ ಹೆಂಡತಿಯರ ವಿರುದ್ಧ ಡಿ.ವಿ. ಪ್ರಕರಣವನ್ನು ಕಾರವಾರ ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ ಎಂದರೆ ಸರಿ. ಅದರಲ್ಲಿ ಪರಿಹಾರವಾಗಿ ಮಾಸಿಕ ಜೀವನಾಂಶ ರೂ.10,000-00, ಮಧ್ಯಂತರ ಜೀವನಾಂಶ ರೂ. 10,000-00 ಮತ್ತು ರೂ. 5,00,000-00 ಕೇಳಿರುತ್ತೇನೆ ಎಂದರೆ ಸರಿ. ಅದರ ನಂತರ ನನ್ನ ಗಂಡ ತಪ್ಪು ಒಪ್ಪಿಕೊಂಡು ನನಗೆ ಮನೆಗೆ ಕರೆದುಕೊಂಡು ಹೋಗಿದ್ದರು. ಅದು ಕಾರವಾರ ನ್ಯಾಯಾಲಯದಲ್ಲಿ ಇತ್ತು. ಅದು ನ್ಯಾಯಾಲಯದಲ್ಲೇ ಮುಕ್ತಾಯ ಆಗಿರುತ್ತದೆ. ನನ್ನ ಗಂಡ ತಪ್ಪು ಒಪ್ಪಿಕೊಂಡಿದ್ದರಿಂದ ಅದು ಮುಕ್ತಾಯವಾಗಿದೆ ಎಂದು ಸುಳ್ಳು ಹೇಳುತ್ತಿದ್ದು ನಾನೇ ಸ್ವತಃ ಅರ್ಜಿಯನ್ನು ಹಿಂಪಡೆದಿದ್ದೆ ಎಂದರೆ ಸರಿಯಲ್ಲ. ನಂತರ ನಾನು 2020 ರಲ್ಲಿ ಇನ್ನೊಂದು ಡಿ.ವಿ. ಪ್ರಕರಣ ದಾಖಲಿಸಿದ್ದೆ. 2020 ರಲ್ಲಿ ಡಿ.ವಿ. ಪ್ರಕರಣ ದಾಖಲಿಸಿದಾಗ ನನ್ನ ಗಂಡ ಇದ್ದರು. ನಂತರ ಅವರು ಮೃತಪಟ್ಟಿರುವ ಕಾರಣ ನಾನು ಡಿ.ವಿ. ಪ್ರಕರಣ ಹಿಂಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ ಅವರಿಗೆ ಮತ್ತು ಅವರ ಕುಟುಂಬದವರಿಗೆ ತೊಂದರೆ ಕೊಡಬೇಕೆಂಬ ಕಾರಣದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಗಂಡನಿಗೆ 9 ವರ್ಷದವರೆಗೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸ್ವಂತ ಮನೆಗೆ ಅವರು ಬೀಗ ಹಾಕಿದ್ದರು ಎನ್ನುವರು. ನನ್ನ ಗಂಡ ಗೋವಾದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸಾಯುವ 5 ವರ್ಷಗಳ ಮೊದಲು ಗೋವಾ ಕೆಲಸ ಬಿಟ್ಟು ಅರ್ಗಾದಲ್ಲಿ ವಾಸಿಸುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಸಾಯುವ 2 ವರ್ಷಗಳ ಮೊದಲು ಎನ್ನುವರು. ನನ್ನ ಗಂಡನಿಗೆ ಹೈ ಡಯಾಬಿಟಿಸ್ ಇದ್ದು ಔಷದೋಪಚಾರ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಅವರಿಗೆ ಡಯಾಬಿಟಿಸ್ ಇತ್ತು, ಆದರೆ ಹೈ ಇರಲಿಲ್ಲ ಅದಕ್ಕೆ ಮಾಮೂಲಿ ದಿನನಿತ್ಯದ ಔಷಧಿ ಇತ್ತು ಎನ್ನುವರು. ಅವರು ದಿನಾಂಕ 26-09-2021 ರಂದು ಮೃತಪಟ್ಟಿದ್ದರು. ಆ ಸಮಯದಲ್ಲಿ ಅವರಿಗೆ ಗ್ಯಾಂಗರೀನ್ ಆಗಿ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಯರು ಅವರಿಗೆ

ಮೂ. ದಾ. ನಂ. 19/22

ಪಿ.ಡಬ್ಲ್ಯು.1

ಅಂಕೋಲಾ ಅವಿನಾಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ಅವರು ನನ್ನ ಸಂಗಡ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು ನಂತರ ಅವರ ತಾಯಿಗೆ ಆರಾಮ್ ಇಲ್ಲ ಎಂದು ಹೇಳಿ ತಾಯಿ ಮನೆಗೆ ಹೋಗಿದ್ದು 2 ತಿಂಗಳ ಕಾಲ ಮಾತ್ರ ಹೋಗಿದ್ದರು. ಅವರು ಮದುವೆಯಾದ ನಂತರ ನನ್ನ ಜೊತೆಯಲ್ಲಿಯೇ ಗೋವಾದಲ್ಲಿ ಸುಮಾರು 24 ವರ್ಷ ಒಟ್ಟಿಗೆ ಇದ್ದರು. ನಾವು ಗೋವಾದಿಂದ ಇಲ್ಲಿಗೆ ಬಂದ 2 ವರ್ಷಗಳಲ್ಲಿ ಅವರು ಮೃತಪಟ್ಟಿದ್ದರು. 2 ವರ್ಷಗಳ ನನ್ನ ಗಂಡ ಸ್ವಲ್ಪ ಸಮಯ ತಂದೆ-ತಾಯಿ ಜೊತೆ ಅರ್ಗಾದಲ್ಲಿ ವಾಸಿಸುತ್ತಿದ್ದು ಸ್ವಲ್ಪ ಸಮಯ ನನ್ನ ಜೊತೆ ಕೋಡಿಭಾಗದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು.

ದಾವಾಸ್ತಿಯನ್ನು ನನ್ನ ಗಂಡ ಮತ್ತು 2 ರಿಂದ 4 ನೇ ಪ್ರತಿವಾದಿಯರು ಜಂಟಿಯಾಗಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅಲ್ಲಿದ್ದ ಮನೆಯನ್ನು 2 ರಿಂದ 4 ನೇ ಪ್ರತಿವಾದಿಯರು ಅವರ ಹಣದಿಂದ ಮತ್ತು ತಂದೆಯವರು ಕೊಟ್ಟ ಹಣದಿಂದ ನಿರ್ಮಿಸಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಲ್ಲಿ ಉಳಿದುಕೊಳ್ಳಲು 2 ರೂಮ್‌ನ್ನು ಪಡವಿ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಮನೆಯನ್ನು ಅತ್ತೆ- ಮಾವ ಮತ್ತು ನನ್ನ ಗಂಡ ಸೇರಿ ಕಟ್ಟಿದ್ದರು. ಆ ರೀತಿ ಅತ್ತೆ - ಮಾವ ಮತ್ತು ಗಂಡ ಸೇರಿ ಕಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ

ಮೂ. ದಾ. ನಂ. 19/22
ಪಿ.ಡಬ್ಲ್ಯು.1